ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಬೆಂಗಳೂರು – 560001.

ಸಂಖ್ಯೆ: ಸಿ4(3)/ರಜೆಮಂ/10/2009–10 ದಿನಾಂಕ: 30.03.2010

**ಸುತ್ತೋಲೆ**

ವಿಷಯ: ರಜೆಯ ಅವಧಿಯಲ್ಲಿ ಜನಗಣತಿಯಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರುಗಳಿಗೆ/ ಮುಖ್ಯಶಿಕ್ಷಕರುಗಳಿಗೆ ಗಳಿಕೆ ರಜೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1) ನಿರ್ದೇಶಕರು, ಜನಗಣತಿ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ :CEN/19/KAR/2009(Vol.1) ದಿನಾಂಕ: 19.03.2010.

2) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ34 ಎಸ್‌ಟಿಬಿ 2010 ದಿನಾಂಕ 15.03.2010

– * * * –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತದ ಜನಗಣತಿ – 2011 ಕಾರ್ಯಕ್ರಮದ ಬಗ್ಗೆ ಜನಗಣತಿ ಕಾರ್ಯ ಹಾಗೂ ಈ ಸಂಬಂಧ ತರಬೇತಿ ಇತ್ಯಾದಿ ಅಂಶಗಳ ಬಗ್ಗೆ ಉಲ್ಲೇಖಿತ ಸರ್ಕಾರಿ ಪತ್ರದಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಿ ಅದರಂತೆ ಕ್ರಮಕೈಗೊಳ್ಳಲು ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಸೂಚಿಸಲಾಗಿದೆ. ಬೇಸಿಗೆ ರಜಾ ಅವಧಿಯಲ್ಲಿ ಈ ಜನಗಣತಿ ಕಾರ್ಯವನ್ನು ನಿರ್ವಹಿಸುವ ಶಿಕ್ಷಕರು ಹಾಗೂ ಮುಖ್ಯಶಿಕ್ಷಕರುಗಳಿಗೆ ಕರ್ನಾಟಕ ಸರ್ಕಾರಿ ನಾಗರೀಕ ಸೇವಾ ನಿಯಮಗಳು–113(ಎ)ರ ಪ್ರಕಾರ ಗಳಿಕೆ ರಜೆಯನ್ನು ಕೆಳಕಂಡ ಸೂತ್ರದಂತೆ ಮಂಜೂರು ಮಾಡಿ ಸೇವಾ ಪುಸ್ತಕದಲ್ಲಿ ದಾಖಲಿಸಲು ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

1) ವರ್ಷದಲ್ಲಿ ಒಟ್ಟು ರಜಾ ಅವಧಿ : 47ದಿನಗಳು (P)

2) ಜನಗಣತಿಗಾಗಿ ಉಪಯೋಗಿಸಿಕಂಡ ರಜಾ ಅವಧಿ : 25ದಿನಗಳು (Q)

3) ಕ್ರಮ ಸಂಖ್ಯೆ 2ರ ಅವಧಿಗೆ ದೊರೆಯುವ ಗಳಿಕೆ ರಜೆ ( ಕೆ.ಸಿ.ಎಸ್.ಆರ್. 113 ರಂತೆ) : $\frac{Q \times 30}{P}$

ಉದಾಹರಣೆ: ಜನಗಣತಿಯ ವರ್ಷದಲ್ಲಿ ರಜಾ ಅವಧಿಯು 47(P) ದಿನಗಳಾಗಿದ್ದಲ್ಲಿ, ಮತ್ತು ಜನಗಣತಿಗಾಗಿ ಉಪಯೋಗಿಸಿಕೊಂಡ ರಜಾ ಅವಧಿ 25 (Q) ದಿನಗಳಾಗಿದ್ದಲ್ಲಿ, ಈ ಕೆಳಕಂಡಂತೆ ಗಳಿಕೆ ರಜೆಗೆ ಅರ್ಹರಿರುತ್ತಾರೆ.

ಗಳಿಕೆ ರಜೆ = $\frac{25X30}{47}$ = 15.95 = 16 ದಿನಗಳು.

ಈ ರೀತಿ ಮಂಜೂರು ಮಾಡುವ ಗಳಿಕೆರಜೆಯನ್ನು ಕ್ಯಾಲೆಂಡರ್ ವರ್ಷದಲ್ಲಿ ಗರಿಷ್ಠ 30 ದಿನಗಳಿಗೆ ಮೀರದಂತೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

'ಮಾನ್ಯ ಆಯುಕ್ತರ ಆದೇಶದ ಮೇರೆಗೆ'

(ಚಿದ್ರೆ ಶಂಕರಯ್ಯ ಸ್ವಾಮಿ)
ನಿರ್ದೇಶಕರು (ಪ್ರೌಢಶಿಕ್ಷಣ)

ಇವರಿಗೆ,

1) ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ – ಅಗತ್ಯ ಕ್ರಮಕ್ಕಾಗಿ

2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ – ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು ಮಾಹಿತಿಗಾಗಿ,

1) ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ಧಾರವಾಡ – ಇವರಿಗೆ ಸಲ್ಲಿಸಿದೆ.

2) ನಿರ್ದೇಶಕರು, ಜನಗಣತಿ ನಿರ್ದೇಶನಾಲಯ, 7ನೇ ಮಹಡಿ, ಕೇಂದ್ರಿಯ ಸದನ, ಕೋರಮಂಗಲ ಬೆಂಗಳೂರು –34. ಇವರಿಗೆ ಸಲ್ಲಿಸಿದೆ.

3) ಕಛೇರಿ ಪ್ರತಿ.

\\Typing3server\d\E\EST4\Census2011.doc